RENUKA'S COACHING CENTRE
Admission Open
For II PUC PCMB (2018-2019)
& Crash Course
CET/ NEET/ JEE (2018)
at Vijayanagar & Kuvempunagar
98863-15046
9620516966
9886060197

ಆಂದೋಲನ
ದಿನಪತ್ರಿಕೆ
ಸಂಸ್ಥಾಪಕ ಸಂಪಾದಕ: ರಾಜಶೇಖರ ಕೋಟಿ

ಮೈಸೂರು ನಂದಿನಿ ಫ್ಯಾಮಿಲಿ ರೆಸ್ಟೋರೆಂಟ್
mysore nandhini Heritage
Family Restaurant Veg & Non Veg
Andhra Style Irwin Road, Near KSRTC Bus Stand, Mysuru - 01
Tandoori Chinese Sea Food
Ph: 0821 - 4191009, 2430241
90082 85555
FREE HOME DELIVERY
Parking Available

ಇತ್ತೀಚೆಗಷ್ಟೇ ಬಿಜೆಪಿ ಸೇರಿದ್ದ, ವಿಶ್ವಕರ್ಮ ಜನಾಂಗದ ನಾಯಕ, ಚಿನ್ನಾಭರಣ ವರ್ತಕ ಕೆ.ಪಿ.ನಂಜುಂಡಿ ಅವರ ಮನೆ, ಕಚೇರಿ ಮತ್ತು ಆಭರಣ ಮಳಿಗೆಗಳ ಮೇಲೆ ಆದಾಯ ತೆರಿಗೆ ಅಧಿಕಾರಿಗಳ ತಂಡ ಗುರುವಾರ ದಾಳಿ ನಡೆಸಿ ಅಪಾರ ಪ್ರಮಾಣದ ದಾಖಲೆಗಳನ್ನು ವಶಪಡಿಸಿಕೊಂಡಿದೆ.

ನಂಜುಂಡಿ ಮೇಲೆ ಐಟಿ ಪ್ರಹಾರ

ಇಂದು ಮೈಸೂರಿಗೆ ರಾಜ್ಯಪಾಲರ ಆಗಮನ

ರಾಜ್ಯಪಾಲ ವಜುಭಾಯಿ ವಾಲ ಅವರು ಮೈಸೂರಿನ ಅಖಿಲ ಭಾರತೀಯ ವಾಕ್-ಶ್ರವಣ ಸಂಸ್ಥೆಯ ಪಂಚವಟಿ ಕ್ಯಾಂಪಸ್‌ನಲ್ಲಿ ೫೦ನೇ ವಾರ್ಷಿಕೋತ್ಸವದಲ್ಲಿ ಶುಕ್ರವಾರ ಭಾಗವಹಿಸುವರು.

ಗರಿಷ್ಠ: ೨೮° । ಕನಿಷ್ಠ: ೧೪° ಬಿಸಿಲ ತಾಪ ಏರಿಕೆ, ಮಳೆ ಮೋಡಗಳು ದೂರ

ಸಂಪುಟ: ೪೭, ಸಂಚಿಕೆ: ೫, ರಾಷ್ಟ್ರೀಯ ಶಕ ೧೯೩೯ ಶಿಶಿರ:ಪುಷ್ಯ–ಮಾಘ ೧೫, • ಚೌತಿ – ಮಘಾ, ಶುಕ್ರವಾರ, ಜ.೫, ೨೦೧೮, ದೂರವಾಣಿ: ೨೪೪೯೫೫೧, ೨೪೪೯೫೫೪, ೨೪೪೯೫೫೫, ಫ್ಯಾಕ್ಸ್: ೨೪೪೯೫೫೩, ಪುಟ : ೧೨+೪, ರೂ. ೩

ಸ್ವಚ್ಛ ನಗರ: ಹೊಣೆ ನಿಮ್ಮದು

■ ಸ್ವಚ್ಛ ಸರ್ವೇಕ್ಷಣ್-೨೦೧೮ರ ಪ್ರಕ್ರಿಯೆ ಆರಂಭ
■ ವೋಟಿಂಗ್ ಲೈನ್ ಮುಕ್ತ-ಮಾ.೧೦ ಕೊನೆದಿನ

೨೭,೦೦೦	೧೯೬೯	೧೦೦೦
ಆ್ಯಪ್ ಡೌನ್‌ಲೋಡ್	ಟೋಲ್ ಫ್ರೀ ಸಂಖ್ಯೆ	ನಾಗರಿಕರ ಪಾಲಿನ ಅಂಕ

ಮೈಸೂರು,ಜ.೪– ದೇಶದ ಸ್ವಚ್ಛ ನಗರ ಸಮೀಕ್ಷೆಯ ಪ್ರಕ್ರಿಯೆ ಆರಂಭವಾಗಿದ್ದು, ಜ.೪ರ ಗುರುವಾರದಿಂದಲೇ ವೋಟಿಂಗ್ ಲೈನ್‌ಗಳು ತೆರೆದಿವೆ. ಮೈಸೂರು ಜಿಲ್ಲೆ ತಿ.ನರಸೀಪುರ ಸೇರಿದಂತೆ ದೇಶದ ೨ ಸಾವಿರ ನಗರ, ಪಟ್ಟಣಗಳಲ್ಲಿ ಏಕಕಾಲಕ್ಕೆ ಸಮೀಕ್ಷೆ ಆರಂಭವಾಗಿದೆ.

ದೇಶದ ಸ್ವಚ್ಛ ನಗರಿ ಪಟ್ಟಿಯಲ್ಲಿ ಸತತ ೨ ಬಾರಿ ನಂ.೧ ಸ್ಥಾನದಲ್ಲಿದ್ದ ಮೈಸೂರು ನಗರ ಕಳೆದ ಬಾರಿ ೫ನೇ ಸ್ಥಾನಕ್ಕೆ (ಉನ್ನತ ೧೦ರಲ್ಲಿತ್ತು) ಇಳಿದಿತ್ತು. ಮೈಸೂರು ನಗರವನ್ನು ಮತ್ತೆ ೧ನೇ ಸ್ಥಾನಕ್ಕೆ ತರುವ ನಿಟ್ಟಿನಲ್ಲಿ ಈ ಬಾರಿ ಸಾರ್ವಜನಿಕರು, ಸಂಘ ಸಂಸ್ಥೆಗಳ ಸಹಭಾಗಿತ್ವದಲ್ಲಿ ಮೈಸೂರು ಮಹಾನಗರ ಪಾಲಿಕೆಯು ಪೂರ್ವ ಸಿದ್ಧತೆಗಳನ್ನು ಭರ್ಜರಿಯಾಗಿ ನಡೆಸಿದೆ.

ಮೈಸೂರು ನಗರದ ಸಮೀಕ್ಷೆ ಕಾರ್ಯ ಜ.೧೧ರ ನಂತರ ಆರಂಭವಾಗುವ ಸಾಧ್ಯತೆ ಇದೆ. ನಾಗರಿಕರ ಸ್ಪಂದನೆ ಹಾಗೂ ಅವರ ಅಭಿಪ್ರಾಯ ದಾಖಲೀಕರಣ ಗುರುವಾರದಿಂದಲೇ ಆರಂಭವಾಗಿದೆ. ಈ ಬಾರಿ ಮೊದಲ ಸ್ಥಾನಕ್ಕೇರಲು ನಾಗರಿಕರ ಪಾತ್ರ ಅತ್ಯಂತ ಪ್ರಮುಖವಾಗಿದೆ.

ಸ್ಪರ್ಧೆಯಲ್ಲಿ ನಗರಗಳು

೨೦೧೫	೬೫
೨೦೧೬	೮೫
೨೦೧೭	೪೮೦
೨೦೧೮	೪೦೪೧

ಕಳೆದ ಬಾರಿ ಹ್ಯಾಟ್ರಿಕ್ ಪ್ರಶಸ್ತಿಯ ಗರಿ ತಪ್ಪಲು ನಾಗರಿಕರ ಸ್ಪಂದನೆ (ಫೀಡ್‌ಬ್ಯಾಕ್) ಯಲ್ಲಿ ಮೈಸೂರು ಹಿಂದೆ ಬಿದ್ದಿದ್ದೇ ಕಾರಣವಾಯಿತು. ಹೀಗಾಗಿ ಈ ಬಾರಿಯಾದರೂ ನಾಗರಿಕರು ಸ್ವಚ್ಛ ಸರ್ವೇಕ್ಷಣೆ ಮತದಾನದಲ್ಲಿ ಹೆಚ್ಚು ಹೆಚ್ಚು ಪಾಲ್ಗೊಂಡು, ಅದಕ್ಕಾಗಿ ಮೀಸಲಾಗಿರುವ ೧೦೦೦ ಅಂಕಗಳು ದೊರೆಯುವಂತೆ ಮಾಡಬೇಕು ಎಂದು ಸ್ವಚ್ಛತಾ ರಾಯಭಾರಿಗಳು, ಮಹಾಪೌರರು, ಪಾಲಿಕೆ ಆಯುಕ್ತರು, ಸ್ವಯಂ ಸೇವಾ ಸಂಸ್ಥೆಗಳ ಮುಖ್ಯಸ್ಥರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಮಹಾನಗರ ಪಾಲಿಕೆ ಸಭಾಂಗಣದಲ್ಲಿ ಗುರುವಾರ ನಡೆದ ಸಭೆಯಲ್ಲಿ ಮಹಾಪೌರ ಎಂ.ಜೆ.ರವಿಕುಮಾರ್, ಪಾಲಿಕೆ ಆಯುಕ್ತ ಜಿ.ಜಗದೀಶ್, ವಾರ್ಡ್ ಪಾರ್ಲಿಮೆಂಟ್ ಅಧ್ಯಕ್ಷ ಹಾಗೂ ಮಾಜಿ ಶಾಸಕ ಡಿ.ಮಾದೇಗೌಡ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಸಿ.ಕೆ.ಮಹೇಂದ್ರ ಅವರುಗಳು ಮಾತನಾಡಿ ಸಾರ್ವಜನಿಕರ ಸಹಭಾಗಿತ್ವದ ಪ್ರಾಮುಖ್ಯತೆಯನ್ನು ವಿವರಿಸಿದರು.

ಸ್ವಚ್ಛತಾ ಸರ್ವೇಕ್ಷಣ್‌ಗೆ ಸಂಬಂಧಿಸಿ ಮೈಸೂರು ಮಹಾನಗರ ಪಾಲಿಕೆಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಮಹಾಪೌರ ಎಂ.ಜೆ.ರವಿಕುಮಾರ್, ಪಾಲಿಕೆ ಆಯುಕ್ತ ಜಿ.ಜಗದೀಶ್, ಡಿ.ಮಾದೇಗೌಡ, ಪಾಲಿಕೆ ಸದಸ್ಯರಾದ ಕೆ.ವಿ.ಮಲ್ಲೇಶ್, ಮಹದೇವಪ್ಪ, ಕೆ.ಟಿ.ಚಲುವೇಗೌಡ, ಜಗದೀಶ್ ಹಾಗೂ ಸಿ.ಕೆ.ಮಹೇಂದ್ರ, ಡಾ.ನಾಗಪತಿ, ವೆಂಕಟೇಶ್, ಮಧುಕೇಶ್, ಶ್ರೀನಾಥ್, ಡಾ.ರಾಮಚಂದ್ರ, ಡಾ.ಕಾಂತರಾಜು ಮತ್ತಿತರರು ಚಿತ್ರದಲ್ಲಿದ್ದಾರೆ.

ಮೈಸೂರು ಎಕ್ಸ್‌ಪ್ರೆಸ್ ಖ್ಯಾತಿಯ ಕ್ರಿಕೆಟಿಗ ಜಾವಗಲ್ ಶ್ರೀನಾಥ್, ಪ್ರಮೋದಾದೇವಿ ಒಡೆಯರ್, ಯದುವಂಶದ ಉತ್ತರಾಧಿಕಾರಿ ಯದುವೀರ್, ಶ್ರೀ ರಾಮಕೃಷ್ಣಾಶ್ರಮದ ಸ್ವಾಮಿ ಆತ್ಮಜ್ಞಾನಂದಜಿ ಮತ್ತು ಅಂತಾರಾಷ್ಟ್ರೀಯ ಯೋಗಬಾಲೆ ಖುಷಿ ಈ ಬಾರಿಯ ಸ್ವಚ್ಛತಾ ರಾಯಭಾರಿಗಳು. ಅಲ್ಲದೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅವಧೂತ ದತ್ತ ಪೀಠದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಹಾಗೂ ನಗರದ ಹಲವು ಮುಖಂಡರು ಸ್ವಚ್ಛತೆ ಮತ್ತು ಜನರಲ್ಲಿ ಅರಿವು ಮೂಡಿಸುವ ಕಾರ್ಯಗಳಲ್ಲಿ ಸಹಕಾರ ನೀಡಿದ್ದಾರೆ.

೪೦೦ ಅಂಕ ಬಂದಿವೆ: ಆಯುಕ್ತ ಜಿ.ಜಗದೀಶ್ ಅವರು ಮಾತನಾಡಿ, ಪ್ರಕ್ರಿಯೆ ಇಂದಿನಿಂದ ಆರಂಭವಾಗಿದೆ. ನಾಗರಿಕರ ಪ್ರತಿಕ್ರಿಯೆ (ಮರು ಮಾಹಿತಿ) ಮುಖ್ಯವಾಗಿದೆ. ಇದಕ್ಕಾಗಿಯೇ ಇರುವ ಒಟ್ಟು ೧೪೦೦ ಅಂಕಗಳಲ್ಲಿ ಸ್ವಚ್ಛತಾ ಆ್ಯಪ್ ಡೌನ್‌ಲೋಡ್ ಮೂಲಕ ಈಗಾಗಲೇ ೪೦೦ ಅಂಕಗಳನ್ನು ಖಾತ್ರಿ ಪಡಿಸಿಕೊಂಡಿದ್ದೇವೆ. ಉಳಿದಿರುವ ೧೦೦೦ ಅಂಕಗಳು ನಾಗರಿಕರ ಪ್ರತಿಕ್ರಿಯೆಯನ್ನು ಅವಲಂಬಿಸಿವೆ. ನಾಗರಿಕರು ಹೆಚ್ಚು ಪ್ರತಿಕ್ರಿಯೆ ನೀಡಬೇಕು. ಮಾ.೧೦ರವರೆಗೆ ಫೀಡ್‌ಬ್ಯಾಕ್ ನೀಡಬಹುದಾಗಿದೆ ಎಂದರು.

ಶೇ.೮೦ ಅಂಕಗಳನ್ನು ಜನರ ಪ್ರತಿಕ್ರಿಯೆಗೆ ಮೀಸಲಿಟ್ಟಿದ್ದರೆ, ಶೇ.೨೦ ಅಂಕ ಆನ್‌ಲೈನ್ ಓಟಿಂಗ್‌ಗೆ ನೀಡಲಾಗುತ್ತದೆ. ಟೋಲ್‌ಫ್ರೀ ಸಂಖ್ಯೆ ೧೯೬೯ಕ್ಕೆ ಮಿಸ್ ಕಾಲ್ ನೀಡಿದರೆ ಅಲ್ಲಿಂದ ತಕ್ಷಣವೇ ಕರೆ ಬಂದು ೬ ಪ್ರಶ್ನೆಗಳನ್ನು ಕೇಳಲಾಗುತ್ತದೆ.

⏭ ೮

ಪೊಲೀಸ್ ಠಾಣೆ ಜನಸ್ನೇಹಿ ನಡೆ

ಮೈಸೂರಿನ ಪೊಲೀಸ್ ಠಾಣೆಗಳಲ್ಲಿ ಆರಂಭಿಸುತ್ತಿರುವ ಸ್ವಾಗತಕಾರರ ವಿಭಾಗಕ್ಕೆ ನೇಮಕಗೊಂಡ ಸಿಬ್ಬಂದಿಗೆ ಗುರುವಾರ ತರಬೇತಿ ನೀಡಲಾಯಿತು.

ಮೈಸೂರು,ಜ.೪– ನಮಸ್ಕಾರ... ಬನ್ನಿ... ಕುಳಿತುಕೊಳ್ಳಿ... ನಿಮ್ಮ ಸಮಸ್ಯೆ ಏನು...?

ಹೀಗೆ ನಗರದ ಎಲ್ಲಾ ಠಾಣೆಗಳಲ್ಲಿಯೂ ಪೊಲೀಸರು ಸಾರ್ವಜನಿಕರನ್ನು ಇನ್ನು ಮುಂದೆ ಇದೇ ಮಾದರಿಯಲ್ಲಿ ಗೌರವಯುತವಾಗಿ ನಡೆಸಿಕೊಳ್ಳಲಿದ್ದಾರೆ!

ಠಾಣೆಗಳಲ್ಲಿ ಆರಂಭಗೊಳ್ಳುತ್ತಿರುವ ಸ್ವಾಗತಕಾರರ ವಿಭಾಗವು ಠಾಣೆಗೆ ಬರುವ ಸಾರ್ವಜನಿಕರನ್ನು ನಗುಮೊಗದಿಂದ ಸ್ವಾಗತಿಸಿ, ಸಮಸ್ಯೆ, ನೋವನ್ನು ಆಲಿಸಬೇಕೆಂದು ನಗರ ಪೊಲೀಸ್ ಆಯುಕ್ತರು ಕಟ್ಟುನಿಟ್ಟು ಸೂಚನೆ ನೀಡಿದ್ದಾರೆ. ಆ ಮೂಲಕ ಪೊಲೀಸ್ ಇಲಾಖೆ ಜನಸ್ನೇಹಿಯಾಗಲು ಮುಂದಡಿ ಇಟ್ಟಿದೆ.

- ● ಎಲ್ಲಾ ಠಾಣೆಗಳಲ್ಲಿ ಸ್ವಾಗತಕಾರರ ವಿಭಾಗ ಶೀಘ್ರ ಆರಂಭ
- ● ಡಿಜಿಪಿ ಸೂಚನೆ, ಆಯುಕ್ತರ ಆಸಕ್ತಿಯ ಪರಿಣಾಮ

ನಗರದಲ್ಲಿನ ಮೊದಲ ಸ್ವಾಗತಕಾರರ ವಿಭಾಗ ನಗರದ ವಿವಿ ಪುರಂ ಸಂಚಾರ ಪೊಲೀಸ್ ಠಾಣೆಯಲ್ಲಿ ಗುರುವಾರ ಬೆಳಿಗ್ಗೆ ಆರಂಭಗೊಳ್ಳುವುದರೊಂದಿಗೆ ಸಾರ್ವಜನಿಕರು–ಪೊಲೀಸರ ಸಂಬಂಧ ಗಟ್ಟಿಗೊಳಿಸುವ ಯತ್ನ ಆರಂಭಗೊಂಡಂತಾಗಿದೆ.

ಗುರುವಾರ ಬೆಳಿಗ್ಗೆ ಏರ್ಪಡಿಸಿದ್ದ ಸರಳ ಸಮಾರಂಭದಲ್ಲಿ ಡಾ.ಎ.ಸುಬ್ರಹ್ಮಣ್ಯೇಶ್ವರ ರಾವ್ ಅವರು ಸ್ವಾಗತಕಾರರ ಕೇಂದ್ರವನ್ನು ಉದ್ಘಾಟಿಸಿದರು. ಅವರೊಂದಿಗೆ ಡಿಸಿಪಿ ವಿಕ್ರಂ ಅಮಟೆ, ಇನ್‌ಸ್ಪೆಕ್ಟರ್ ಸಿ.ವಿ.ರವಿ ಮತ್ತಿತರರು ಹಾಜರಿದ್ದರು. ಮೊದಲ ಕೇಂದ್ರದ ಪ್ರಥಮ ಸ್ವಾಗತಕಾರರಾಗಿ ಠಾಣೆಯ ಮುಖ್ಯ ಪೇದೆ ಶಿವಕುಮಾರ್ ಗುರುವಾರ ಬೆಳಿಗ್ಗೆ ಸಾರ್ವಜನಿಕ ಸೇವೆ ಆರಂಭಿಸಿದರು.

⏭ ೬

ಬಾಣಂತಿ ಆತ್ಮಹತ್ಯೆ ಯತ್ನ

ವರದಕ್ಷಿಣೆ ಕಿರುಕುಳ ಹಿನ್ನೆಲೆ; ಮಂಡ್ಯ ಆಲಕೆರೆಯಲ್ಲಿ ಘಟನೆ; ಬಾಣಂತಿ ಸ್ಥಿತಿ ಗಂಭೀರ, ಪತಿ ನಾಪತ್ತೆ

ಮಂಡ್ಯ,ಜ.೪– ಪತಿ ಮನೆಯವರ ವರದಕ್ಷಿಣೆ ಕಿರುಕುಳದಿಂದ ನೊಂದು ಹೋಗಿದ್ದ ೪ ತಿಂಗಳ ಬಾಣಂತಿಯೊಬ್ಬರು ಮೈಮೇಲೆ ಸೀಮೆ ಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ತಾಲ್ಲೂಕಿನ ಆಲಕೆರೆ ಗ್ರಾಮದಲ್ಲಿ ಗುರುವಾರ ಬೆಳಿಗ್ಗೆ ನಡೆದಿದೆ.

ಗ್ರಾಮದ ರಂಜಿನಿ ಎಂಬವರು ಸುಟ್ಟ ಗಾಯಗಳಿಂದ ತೀವ್ರವಾಗಿ ಗಾಯಗೊಂಡು, ಸದ್ಯ ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಘಟನೆ ನಂತರ ಪತಿ ಪ್ರತೀಶ್ ಸ್ಥಳದಿಂದ ನಾಪತ್ತೆ ಯಾಗಿದ್ದಾನೆ.

- ● ಪತಿ-ಪತ್ನಿ ಒಂದೇ ಗ್ರಾಮದವರು
- ● ೪ ವರ್ಷ ಹಿಂದೆ ವಿವಾಹವಾಗಿದ್ದರು
- ● ೪ ತಿಂಗಳ ಮಗು ಸೇರಿ ೨ ಮಕ್ಕಳು

ರಂಜಿನಿ

ಪ್ರತೀಶ್

ಪ್ರತೀಶ್, ರಂಜಿನಿ ಒಂದೇ ಗ್ರಾಮದವರು. ೩ ವರ್ಷಗಳ ಹಿಂದೆ ವಿವಾಹವಾಗಿದ್ದು, ದಂಪತಿಗೆ ೪ ತಿಂಗಳ ಮಗು ಸೇರಿ ಇಬ್ಬರು ಮಕ್ಕಳಿದ್ದಾರೆ. ವರದಕ್ಷಿಣೆ ತರುವಂತೆ ಪತಿ ಪ್ರತೀಶ್ ಪೀಡಿಸುತ್ತಿದ್ದ. ಗುರುವಾರ ಬೆಳಿಗ್ಗೆಯೂ ಇದೇ ವಿಚಾರವಾಗಿ ಗಂಡ–ಹೆಂಡತಿಯರ ನಡುವೆ ಜಗಳ ನಡೆದಿದೆ.

ಈ ವೇಳೆ ರಂಜಿನಿ ಬೆಂಕಿ ಹಚ್ಚಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂದು ತಿಳಿದುಬಂದಿದೆ.

ಸುಟ್ಟ ಗಾಯಗಳಿಂದ ಗಂಭೀರ ಸ್ಥಿತಿಯಲ್ಲಿದ್ದ ರಂಜಿನಿ ಅವರನ್ನು ಸ್ಥಳೀಯರು ಮತ್ತು ಪೋಷಕರು ತಕ್ಷಣ ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ಕರೆತಂದು ಪ್ರಥಮ ಚಿಕಿತ್ಸೆ ಕೊಡಿಸಿದ್ದಾರೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ.

⏭ ೬

ಇಂದು ಭಾರತ ದ. ಆಫ್ರಿಕಾ ಟೆಸ್ಟ್ ಕದನ

ಕೇಪ್‌ಟೌನ್, ಜ.೪– ಟೆಸ್ಟ್ ಕ್ರಿಕೆಟ್‌ನಲ್ಲಿ ಅಗ್ರ ೨ ಸ್ಥಾನಗಳಲ್ಲಿರುವ ಭಾರತ ಮತ್ತು ದ.ಆಫ್ರಿಕಾ ತಂಡಗಳ ೩ ಟೆಸ್ಟ್ ಪಂದ್ಯಗಳ ಸರಣಿಗೆ ಶುಕ್ರವಾರ ಚಾಲನೆ ಸಿಗಲಿದೆ.

ಸದ್ಯ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರ ಸ್ಥಾನದಲ್ಲಿರುವ ಭಾರತಕ್ಕೆ ರ‍್ಯಾಂಕಿಂಗ್‌ನಲ್ಲಿ ೨ನೇ ಸ್ಥಾನದಲ್ಲಿರುವ ದ.ಆಫ್ರಿಕಾ ತವರಿನಲ್ಲಿ ಕಠಿಣ ಸವಾಲು ಎದುರಾಗಲಿದೆ. ವಿರಾಟ್ ಕೊಹ್ಲಿ ನಾಯಕತ್ವದ ಭಾರತ ತಂಡ ನಿರಂತರವಾಗಿ ಟೆಸ್ಟ್ ಸರಣಿಗಳನ್ನು ವಶಪಡಿಸಿ ಕೊಂಡಿರುವುದು ಆತ್ಮ ವಿಶ್ವಾಸವನ್ನು ಹೆಚ್ಚಿಸಿದೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ

ಕೆ.ಆರ್.ನಗರ ಖಾಸಗಿ ಶಾಲೆ ಶಿಕ್ಷಕನ ವಿರುದ್ಧ ಪೋಸ್ಕೋ ಕಾಯ್ದೆಯಡಿ ಪ್ರಕರಣ ದಾಖಲು

ಕೆ.ಆರ್.ನಗರ,ಜ.೪– ಪಟ್ಟಣದ ಸಂತ ಜೋಸೆಫರ ಇಂಗ್ಲಿಷ್ ಮಾಧ್ಯಮ ಖಾಸಗಿ ಶಾಲೆಯ ೬ನೇ ತರಗತಿ ವಿದ್ಯಾರ್ಥಿನಿಗೆ ನಿರಂತರ ಲೈಂಗಿಕ ಕಿರುಕುಳ ನೀಡುತ್ತಿದ್ದ ಶಿಕ್ಷಕನನ್ನು ಪೋಷಕರೇ ಗುರುವಾರ ಥಳಿಸಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಕಾಮುಕ ಶಿಕ್ಷಕನ ವಿರುದ್ಧ ನಗರ ಪೊಲೀಸ್ ಠಾಣೆಯಲ್ಲಿ ಪೋಸ್ಕೋ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ಪಟ್ಟಣದ ಮೈಸೂರು ರಸ್ತೆಯಲ್ಲಿರುವ ಸಂತ ಜೋಸೆಫ್‌ರ ಖಾಸಗಿ ಶಾಲೆಯ ಶಿಕ್ಷಕ ಎಸ್.ಪಿ.ರೋಹಿತ್ ಕುಮಾರ್ ಸದ್ಯ ಪೊಲೀಸರ ವಶದಲ್ಲಿದ್ದಾನೆ.

ಈತ ೩ ತಿಂಗಳ ಹಿಂದಿನಿಂದಲೇ ತರಗತಿ ಸಮಯದಲ್ಲಿ ವಿದ್ಯಾರ್ಥಿನಿಗೆ ನಿತ್ಯ ಲೈಂಗಿಕ ಕಿರುಕುಳ ನೀಡುತ್ತಿದ್ದ. ಶಿಕ್ಷಕನ ಕಿರುಕುಳ ತಾಳಲಾರದೆ ವಿದ್ಯಾರ್ಥಿನಿ ಕಳೆದ ೧ ತಿಂಗಳಿನಿಂದ ಶಾಲೆಗೆ ಗೈರು ಹಾಜರಾಗಿದ್ದಳು.

ಮನದೊಳಗೇ ನೋವು: ಈ ಬಗ್ಗೆ ಪೋಷಕರು ಪ್ರಶ್ನಿಸಿದಾಗ ಶಿಕ್ಷಕನ ಲೈಂಗಿಕ ಕಿರುಕುಳ ವಿಚಾರವನ್ನು ಮುಕ್ತವಾಗಿ ಹೇಳಿಕೊಳ್ಳಲಾಗದೆ ಪರಿತಪಿಸಿದ್ದಾಳೆ. ಆರೋಗ್ಯ ಸರಿಯಿಲ್ಲ ಎಂದಷ್ಟೇ ತಿಳಿಸಿದ್ದಾಳೆ. ಪೋಷಕರು ಮೈಸೂರಿನ ಅಪೋಲೊ ಆಸ್ಪತ್ರೆಗೆ ಮಗಳನ್ನು ಕರೆತಂದು ಚಿಕಿತ್ಸೆ ಕೊಡಿಸಲು ಮುಂದಾಗಿದ್ದಾರೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಹೊತ್ತಿರುವ ಶಿಕ್ಷಕ ಎಸ್.ಪಿ.ರೋಹಿತ್ ಕುಮಾರ್.

⏭ ೮

ಪ್ರೊ.ಮಾಲಗತ್ತಿ, ಪ್ರೊ.ಭಗವಾನ್‌ಗೆ ಜಾಮೀನು

ಮೈಸೂರು,ಜ.೪– ಭಗವದ್ಗೀತೆಗೆ ಬೆಂಕಿ ಹಚ್ಚುವ ಪ್ರಯತ್ನಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಗುರುವಾರ ನ್ಯಾಯಾಲಯಕ್ಕೆ ಹಾಜರಾದ ಪ್ರೊ.ಅರವಿಂದ ಮಾಲಗತ್ತಿ ಹಾಗೂ ಪ್ರೊ.ಕೆ.ಎಸ್.ಭಗವಾನ್ ಅವರಿಗೆ ೪ನೇ ಜೆಎಂಎಫ್‌ಸಿ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.

ಗುರುವಾರ ಬೆಳಿಗ್ಗೆ ನ್ಯಾಯಾಲಯಕ್ಕೆ ಹಾಜರಾದ ಮಾಲಗತ್ತಿ, ಭಗವಾನ್ ಅವರಿಗೆ ಜಾಮೀನು ಮಂಜೂರು ಮಾಡಿದ ನ್ಯಾಯಾಧೀಶರು, ಮುಂದಿನ ವಿಚಾರಣೆಗೆ ತಪ್ಪದೇ ಹಾಜರಾಗುವಂತೆ ಆದೇಶಿಸಿದರು. ಇದೇ ವೇಳೆ ಈಗಾಗಲೇ ಜಾಮೀನು ಪಡೆದಿರುವ ಮೈಸೂರು ವಿವಿ ಪತ್ರಿಕೋದ್ಯಮ ವಿಭಾಗದ ಪ್ರೊ.ಮಹೇಶ್ ಚಂದ್ರಗುರು ಸಹ ವಿಚಾರಣೆಗೆ ಹಾಜರಾಗಿದ್ದರು.

⏭ ೬

೧೪ರಿಂದ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ

‘ವಲಸೆ’ ಶೀರ್ಷಿಕೆಯಡಿ ರಂಗಾಯಣದಿಂದ ನಾಟಕ, ಚಲನಚಿತ್ರ, ವಿಚಾರ ಸಂಕಿರಣ

ಮೈಸೂರು,ಜ.೪– ಸಮಾಜದ ಎಲ್ಲ ಸ್ಥರಗಳಲ್ಲಿ, ಸೃಜನಶೀಲತೆಯ ಎಲ್ಲ ಪ್ರಕಾರಗಳಲ್ಲಿ ನಡೆಯುವ ವಲಸೆ ಪ್ರಕ್ರಿಯೆ ಯನ್ನು ೨೦೧೮ರ ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಚರ್ಚೆಗೊಳಪಡಿಸಲಿದೆ.

ಸಂಕ್ರಾಂತಿ ಸಮೃದ್ಧಿ ಹಬ್ಬದ ವೇಳೆ ರಂಗಾಯಣ ಸಂಘಟಿಸಲಿರುವ ಬಹುರೂಪಿ ನಾಟಕೋತ್ಸವ ‘ವಲಸೆ’ ಶೀರ್ಷಿಕೆಯಡಿ ಜ.೧೪ರಿಂದ ೨೧ರವರೆಗೆ ನಡೆಯಲಿದೆ ಎಂದು ರಂಗಾಯಣದ ನಿರ್ದೇಶಕಿ ಭಾಗೀರಥಿ ಬಾಯಿ ಕದಂ ತಿಳಿಸಿದರು.

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವ ಸಂಬಂಧ ಗುರುವಾರ ರಂಗಾಯಣದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ನಾಟಕೋತ್ಸವದಲ್ಲಿ ರಂಗಭೂಮಿಗೆ ಸಂಬಂಧಿಸಿದ ಎಲ್ಲ ಕಲಾಪ್ರಕಾರಗಳನ್ನು ಒಂದೇ ಸೂರಿನಡಿ ತಂದು, ರಂಗಾಸಕ್ತರಿಗೆ ಹಲವು ಭಾಷೆ ಮತ್ತು ವಿಭಿನ್ನ ಸಂಸ್ಕೃತಿಯ ಕಲಾ ವೈಶಿಷ್ಟ್ಯಗಳನ್ನು ಪರಿಚಯಿಸಲಾಗುತ್ತದೆ. ವಲಸೆ ವಿಷಯದ ಮೇಲೆ ನಾಟಕ, ಬೀದಿ ನಾಟಕ, ವಿಚಾರ ಸಂಕಿರಣ, ಚಲನಚಿತ್ರೋತ್ಸವ, ಭಿತ್ತಿಚಿತ್ರ, ಜನಪದ, ಕರಕುಶಲ, ಪುಸ್ತಕ ಪ್ರದರ್ಶನ ಮತ್ತು ಮಾರಾಟ ನಡೆಯಲಿವೆ ಎಂದರು.

⏭ ೧೦

- ● ಸಂಕ್ರಾಂತಿ ಸಮೃದ್ಧಿ ವೇಳೆ ಸಾಂಸ್ಕೃತಿಕ ನಗರಿ ಜನರಿಗೆ ರಂಗ ಹಬ್ಬದ ರಸದೌತಣ
- ● ೧೪ರ ಸಂಜೆ ೫.೩೦ಕ್ಕೆ ಭೂಮಿಗೀತದಲ್ಲಿ ಗಿರೀಶ್ ಕಾರ್ನಾಡರಿಂದ ಉದ್ಘಾಟನೆ
- ● ವಿಚಾರ ಸಂಕಿರಣದಲ್ಲಿ ಹಿರಿಯ ಪತ್ರಕರ್ತ ಪಿ.ಸಾಯಿನಾಥ್, ವಕೀಲೆ ನಂದಿತಾ ಹಕ್ಸರ್

ಬಹುರೂಪಿ ರಾಷ್ಟ್ರೀಯ ನಾಟಕೋತ್ಸವದ ಭಿತ್ತಿಚಿತ್ರವನ್ನು ಜಿಲ್ಲಾಧಿಕಾರಿ ಡಿ.ರಂದೀಪ್ ಅವರು ಮೈಸೂರಿನ ರಂಗಾಯಣದಲ್ಲಿ ಗುರುವಾರ ಬಿಡುಗಡೆ ಮಾಡಿದರು. ರಂಗಾಯಣ ನಿರ್ದೇಶಕಿ ಭಾಗೀರಥಿ ಬಾಯಿ ಕದಂ, ಜಂಟಿ ನಿರ್ದೇಶಕ ವಿ.ಎಸ್.ಮಲ್ಲಿಕಾರ್ಜುನ ಸ್ವಾಮಿ, ಸಂಚಾಲಕರಾದ ಮೈಮ್ ರಮೇಶ್, ಕೃಷ್ಣಪ್ರಸಾದ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎಚ್.ಚನ್ನಪ್ಪ ಚಿತ್ರದಲ್ಲಿದ್ದಾರೆ.

ಮೈಸೂರು NECC
ಕೋಳಿ ಮೊಟ್ಟೆ ಧಾರಣೆ
100ಕ್ಕೆ Rs. 400
ದೂರವಾಣಿ: 2425156

Friday 5 January 2018
ಆಂದೋಲನ
ಸುದ್ದಿಗಾಗಿ
andolana@gmail.com

22 ಕ್ಯಾರೆಟ್ ಚಿನ್ನದ ದರ
ತೊಳಸಿ
THOLASI JEWELS
₹2740
1 ಗ್ರಾಂಗೆ
ಹಿಂದಿನ ದಿನದ ದರ
ಅಶೋಕ ರೋಡ್, ಮೈಸೂರು
Ph: 2521926, 2441926